10

# ಕ್ರೂಜಿತನಾದನು ಮತ್ತು ಪುನರುತ್ಥಾನವಾದನು

## (ಯೋಹಾನ 19 ಮತ್ತು 20)

ಯೇಸುವಿನ ಮರಣದ ಕುರಿತಾಗಿ ನಿರಂತರವಾದ ದಾಖಲೆಯನ್ನು, ಯೋಹಾನ 19:18ಎ ನಲ್ಲಿ ಬರೆದು ಆತನ ಕ್ರೂಜೆಯ ಬಗ್ಗೆ ತಿಳಿಸಲಾಗಿದೆ: "ಅಲ್ಲಿ ಆತನನ್ನು ಶಿಲುಬೆಗೆ ಹಾಕಿದರು" ಇಲ್ಲಿ ಕೇವಲ ನಾಲ್ಕು ಪದಗಳನ್ನು ಬಳಸಲಾಗಿದೆ; ಗ್ರೀಕ್ ಭಾಷೆಯ ಯೋಹಾನನ ಬರವಣಿಗೆಯಲ್ಲಿ ಕೇವಲ ಮೂರು ಪದಗಳಿವೆ.

ಇಲ್ಲಿ ಆತನ ಬಾಧೆಗಳ ಕುರಿತು ಆಳವಾದ ಅಧ್ಯಯನವನ್ನು ನೀಡಿರುವದಿಲ್ಲ, ಈ ದಿನಗಳ ಪ್ರಸಂಗಗಳಲ್ಲಿ ಅದನ್ನೇ ಅಧ್ಯತೆಯನ್ನಾಗಿ ಬೋಧಿಸಲಾಗುತ್ತದೆ. ಓದುಗರ ಮನಸ್ಸಿನಲ್ಲಿ ಉದ್ವೇಗ ಉಂಟುಮಾಡುವಂತೆ, ಅದನ್ನು ಕ್ರೂರವಾಗಿ ಚಿತ್ರಿಸಿರುವದಿಲ್ಲ. ಇದಕ್ಕೆ ಎರಡು ಕಾರಣಗಳಿವೆ.

ಯೋಹಾನನು ಮೊದಲನೆಯದಾಗಿ, ಮೂಲ ಓದುಗರ ಚಾವಣಿಯಿಂದ ಹೊಡೆದು ಮತ್ತು ಕ್ರೂಜೆಗೆ ಹಾಕುವ ಸಂಗತಿಗಳನ್ನು ಸಹಜವಾಗಿ ಅರಿತಿದ್ದರು. ಯೇಸುವಿನ ಅನುಭವವನ್ನು ಸಾವಿರಾರು ಜನರು ಅನುಭವಿಸಿದ್ದರು. ಇತರ ತಪ್ಪಿತಸ್ಥರಿಗೆ ಎಚ್ಚರಿಕೆಯನ್ನು ನೀಡುವ ಸಲುವಾಗಿ, ಸಾರ್ವಜನಿಕವಾಗಿ ಅಪರಾಧಿಗಳನ್ನು ಕ್ರೂಜೆಗೆ ಹಾಕುತ್ತಿದ್ದರು.

ಯೋಹಾನ 18:33ರಲ್ಲಿ ಪಿಲಾತನು ಯೇಸುವಿಗೆ ಮಾಡಿದ ವಿಚಾರಣೆಯ ಆರಂಭವನ್ನು ನೋಡುತ್ತೇವೆ. ತಕ್ಷಣವೇ ಆ ದೇಶಾಧಿಪತಿಯು, ಯೇಸುವಿನಿಂದ ರೋಮಾಯರಿಗೆ ಯಾವುದೇ ವಿಪತ್ತು ಇಲ್ಲದಿದ್ದರೂ, ಒಂದು ಧಾರ್ಮಿಕ ಕಾರಣದ ನಿಮಿತ್ತ ಆತನನ್ನು ಎಳೆ ತಂದಿದ್ದರು ಎಂದು ಅರಿತ್ತಿದ್ದನು. ಆದ್ದರಿಂದ ಪಿಲಾತನು ಧಾರ್ಮಿಕ ನಾಯಕರುಗಳನ್ನು ತೃಪ್ತಿಪಡಿಸುವ ಸಲುವಾಗಿ ಆತನನ್ನು ಚಡಿಯಿಂದ ಹೊಡಿಸಿ (19:1-5), ಕ್ರೂಜೆಗೆ ಹಾಕದೆ ಬಿಟ್ಟು ಬಿಡಬೇಕೆಂದಿದ್ದನು (ಲೂಕ 23:16, 22 ನೋಡಿರಿ). ಯೋಹಾನ 19:4ರಲ್ಲಿ ತರುವಾಯ ಪಿಲಾತನು ತಿರುಗಿ ಹೊರಗೆ ಬಂದು ಯೆಹೂದ್ಯರಿಗೆ - ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸಲಿಲ್ಲವೆಂಬದು ನಿಮಗೆ ತಿಳಿಯುವಂತೆ ಅವನನ್ನು ನಿಮ್ಮ ಬಳಿಗೆ ಹೊರಗೆ ತರುತ್ತೇನೆ ಎಂದು ಹೇಳಿದನು (ವಚನ 5). ಆಗ ಯೇಸು ಮುಳ್ಳಿನ ಕಿರೀಟವನ್ನು ಕೆಂಪು ವಲ್ಲಿಯನ್ನೂ ಧರಿಸಿದವನಾಗಿ ಹೊರಕ್ಕೆ ಬಂದನು ಪಿಲಾತನು ಅವರಿಗೆ ಇಗೋ, ಈ ಮನುಷ್ಯನು ಅಂದನು. ನೀವು ಈತನನ್ನು ನೋಡಿ ಭಯಪಡುತ್ತೀರಿ? ಎಂದು ಪಿಲಾತನು ಹೇಳಲು - ಬೇಕಾದರೆ ನೀವೆ ಅವನನ್ನು ತಕ್ಕೊಂಡು ಹೋಗಿ ಶಿಲುಬೆಗೆ ಹಾಕಿಸಿರಿ; ನನಗೆ ಅವನಲ್ಲಿ ಅಪರಾಧವು ಕಾಣಿಸಲಿಲ್ಲ ಅಂದನು (ವಚನ 6ಬಿ).

ಚೌಟಿಯಿಂದ ಹೊಡೆದು ಶಿಲುಬೆಗೆ ಹಾಕುವದು ಸಾಮಾನ್ಯ ಸಂಗತಿಯಾಗಿತ್ತು. ಚೌಟಿಯ ತುದಿಯಲ್ಲಿ ಕಬ್ಬಿಣದ ಮೂಳೆಯ ಅಥವಾ ಗಾಜಿನ ತುಣುಕುಗಳನ್ನು ಹೊಲಿದಿರುತ್ತಿದ್ದರು, ಅದು ದೇಹದ ಮಾಂಸವನ್ನು ಕಿತ್ತು ಹಾಕುತ್ತಿತ್ತು. ಕ್ರೂಜೆಯ ಮರಣಕ್ಕೆ ಆವ್ಯಕ್ತಿ ಹತ್ತಿರವಾಗುತ್ತಿದ್ದನು. ನಾಲ್ಕನೆ ಶತಮಾನದ ಇತಿಹಾಸಕಾರನಾದ ಯುಸೆಬಿಯಸನು ಬರೆದು, ಈ ಚೌಟಿಯಿಂದ ಒಬ್ಬನಿಗೆ ಏಟುಗಳನ್ನು ನೀಡುವಾಗ ಅನೇಕ ಸಾರಿ, ಆ ವ್ಯಕ್ತಿಯ ಒಳ ಅಂಗಗಳು ಬಹಿರಂಗವಾಗಿ ಗೋಚರಿಸುತ್ತಿದ್ದವು ಎಂದಿರುವನು.[1] ಆ ಚೌಟಿಯ ಪೆಟ್ಟಿನ ನಿಮಿತ್ತ ಯೇಸು ತನ್ನ ಶಿಲುಬೆಯ ಭಾರವನ್ನು ಹೊತ್ತುಕೊಂಡು, ಶಿಕ್ಷೆಯ ಸ್ಥಳಕ್ಕೆ ಹೋಗಲು ಅಸಾಧ್ಯವಾಯಿತು (ಮತ್ತಾಯ 27:32).

ಸಾರ್ವಜನಿಕ ಸ್ಥಳಗಳಾದ, ಮುಖ್ಯ ರಸ್ತೆಗಳಲ್ಲಿ, ಜನರಿಗೆ ಎಚ್ಚರಿಕೆ ನೀಡಲು ಜನರನ್ನು ಶಿಲುಬೆಗೆ ಹಾಕುತ್ತಿದ್ದರು. ಅವರು ಯೇಸುವನ್ನು ಶಿಲುಬೆ ಹಾಕಿದ ಸ್ಥಳವು ಪಟ್ಟಣಕ್ಕೆ ಹತ್ತಿರವಾಗಿತ್ತು ಎಂದು ಯೋಹಾನನು ತಿಳಿಸಿದನು. ಇದರ ಪರಿಣಾಮವಾಗಿ, ಯೆಹೂದ್ಯರಲ್ಲಿ ಬಹಳ ಮಂದಿ, ಪಿಲಾತನು ಹಾಕಿದ ತಲೇ ಬರಹವನ್ನು ಓದಿದರು (ರೋಮಾಪುರ 19:19, 20; ಮತ್ತಾಯ 27:37). ಯೋಹಾನನ ದಿವಸಗಳಲ್ಲಿ ಪಾದಗಳಿಗೆ, ಮಣಿಕಟ್ಟುಗಳಿಗೆ (ಅಥವಾ ಹಿಮ್ಮಡಿಗಳಿಗೆ) ಮೊಳೆಯನ್ನು ಜಡಿದು ಕ್ರೂಜೆಗೆ ಹಾಕುತ್ತಿದ್ದರು. ಆಗ ಮರಣವು ನಿಧಾನವಾಗಿ ಬರುತ್ತಿತ್ತು. ಕೆಲವು ಸಾರಿ ಕೆಲವು ದಿನಗಳೇ ಹಿಡಿಯುತ್ತಿದ್ದವು. ಆದ್ದರಿಂದ ಅದರ ಹೆಚ್ಚಿನ ವಿವರಣೆಯ ಅಗತ್ಯವು ಇಲ್ಲದೆ ಇದದ್ದರಿಂದ “ಅಲ್ಲಿ ಆತನನ್ನು ಶಿಲುಬೆಗೆ ಹಾಕಿದರು” ಎಂಬದು ಸಾಕಷ್ಟೆ (ವಚನ 18ಎ).

ಯೇಸುವಿನ ಬಾಧೆಗಳ ಕುರಿತು ಹೆಚ್ಚಿನ ವಿವರಣೆ ನೀಡದೆ ಇರುವದಕ್ಕೆ ಮತ್ತೊಂದು ಕಾರಣವಿದೆ. ಯೇಸುವಿನ ಮರಣವನ್ನು ಭಯಾನಕವಾಗಿ ಚಿತ್ರಿಸಲು ಯೋಹಾನನು ಮುಂದಾಗಲಿಲ್ಲ. ಅದಕ್ಕಿಂತಲೂ ಹೆಚ್ಚಿನ ಆಧ್ಯತೆಗಳ ಕಡೆಗೆ ಗಮನ ನೀಡಿದ್ದನು: (1) ಕ್ರೂಜೆಗೆ ಹಾಕಲ್ಪಟ್ಟವನು ಏನಾಗಿದ್ದನು. (2) ಆತನು ಏಕೆ ಮರಣ ಹೊಂದಿದ್ದನು, ಮತ್ತು (3) ಆತನು ಸತ್ತವನಾಗಿ ಉಳಿಯಲಿಲ್ಲ.

## ಕ್ರೂಜಿತನಾದವನು: ಯೆಹೂದ್ಯರ ಅರಸನು

ಯೋಹಾನ 18:33-38, ಯೇಸುವಿನ ಅರಸು ತನದ ಕುರಿತು ಪಿಲಾತನು ಪ್ರಶ್ನೆಯನ್ನು ಕೇಳಿರುವದರಿಂದ, ಈ 19ನೇ ಅಧ್ಯಾಯದಲ್ಲಿ ಈ ಪ್ರಶ್ನೆಗೆ ಹೆಚ್ಚು ಒತ್ತು ನೀಡಲಾಗಿದೆ. ಇಲ್ಲಿ, ಯೇಸು ತಾನು ಯೆಹೂದ್ಯರ ಅರಸನೇ ಹಾಗೂ “ಈ ಲೋಕವು ತನ್ನದಲ್ಲ ಎಂದು” ಸ್ಪಷ್ಟಪಡಿಸಿದನು (ಯೋಹಾನ 18:36ಎ) - ರೋಮಾಯರ ಅಧಿಕಾರದಂತೆ ಆತನ ಅಧಿಕಾರವು ತಾತ್ಕಾಲಿಕವಲ್ಲ ಎಂಬ ಸೂಚನೆಯನ್ನು ನೀಡಿದನು. ಪಿಲಾತನು ಪದ್ಧತಿಯ ಪ್ರಕಾರ ಯಾರನ್ನು ಬಿಡುಗಡೆ ಮಾಡಲಿ ಎಂದು ಕೇಳಿ, “ನಾನು ಯೆಹೂದ್ಯರ ಅರಸನನ್ನು ಬಿಟ್ಟು ಕೊಡುವದು ನಿಮಗೆ ಇಷ್ಟವೋ?” ಎನ್ನಲು, ಅದಕ್ಕೆ ಅವರು ಇವನನ್ನು ಬೇಡ, ಬರಬ್ಬನನ್ನು ಬಿಟ್ಟುಕೊಡಬೇಕು ಎಂದು ತಿರಿಗಿ ಕೂಗಿ ಹೇಳಿದರು (ಆ ಹೆಸರಿನ ಅರ್ಥ “ತಂದೆಯ ಮಗನು”) (ವಚನ 40).

ಅಧ್ಯಾಯ 19ರಲ್ಲಿ ಮುಂದುವರೆಯುವಾಗ, ಆತನನ್ನು ಯೆಹೂದ್ಯರ ಅರಸನೇ ಎಂದು ಅವಮಾನ ಮಾಡಿದರು (1-3 ವಚನಗಳು). ಸಿಪಾಯಿಗಳು ಮುಳ್ಳು ಬಳ್ಳಿಯಿಂದ ಕಿರೀಟವನ್ನು ಹೆಣೆದು ಆತನ ತಲೆಯ ಮೇಲಿಟ್ಟು ಕೆಂಪುವಲ್ಲಿಯನ್ನು ಆತನಿಗೆ ಹೊದಿಸಿದರು. 12-16 ರವರೆಗೆ, ಪುನಃ ಅರಸನ ಕುರಿತು ನೋಡುತ್ತೇವೆ. “ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳುವವನು ಕೈಸರನಿಗೆ ವಿರೋಧಿ ಎಂದರು. ಆಗ ಪಿಲಾತನು, ಇಗೋ ನಿಮ್ಮ ಅರಸನು ಅಂದನು, ಮತ್ತು ಈತನನ್ನು ಶಿಲುಬೆಗೆ ಹಾಕಿಸಲೇ?” ಹೇಗೂ ಪಿಲಾತನು ಪರೋಕ್ಷವಾಗಿ ಆತನನ್ನು ಕುರಿತ ಸತ್ಯವನ್ನು ಅರಿಕೆ ಮಾಡುತ್ತಿದ್ದನು ಎಂದು ಯೋಹಾನನು ತಿಳಿಸಿರುವನು. ವಚನ 15ರಲ್ಲಿ ಇನ್ನೊಂದು ನಿಂದನೆಯ ಮಾತನ್ನು ನೋಡುತ್ತೇವೆ. “ಪಿಲಾತನ ಪ್ರಶ್ನೆಗೆ ಆ ಜನರು ಪ್ರತಿಕ್ರಿಯಿಸಿ - ಕೈಸರನೇ ಹೊರತು ನಮಗೆ ಬೇರೆ ಅರಸನಿಲ್ಲ” ಎಂಬ ಹೇಳಿಕೆಯನ್ನು ಹೇಳುವದರ ಮೂಲಕ. ದೇವರೇ ಅವರ ನಿಜವಾದ ಅರಸನು ಎಂಬ ಐತಿಹಾಸಿಕ ಸತ್ಯವನ್ನು ಅಲ್ಲಗಳೆದರು. ಇದು ಗಾಬರಿಪಡಿಸುವ ಹೇಳಿಕೆಯಾಗಿದ್ದರೂ, ಯೇಸುವನ್ನು ಶಿಲುಬೆಗೆ ಹಾಕಿಸಲು ಒಪ್ಪಿಸಬೇಕೆಂದು ಪಿಲಾತನನ್ನು ಒತ್ತಾಯಿಸಿದರು.

ಹೇಗೂ ಈ ವಾಕ್ಯಭಾಗದಲ್ಲಿ ಅರಸನು ಎಂಬ ಹೇಳಿಕೆಯು ಇನ್ನೂ ಅಂತ್ಯಗೊಂಡಿರುವದಿಲ್ಲ. ಕ್ರೂಜಿತನಾದವನ ತಲೆಯ ಮೇಲ್ಭಾಗದಲ್ಲಿ ಅವನ ಕುರಿತ ನಾಮ ಫಲಕವನ್ನು ನೇತುಹಾಕುವದು ವಾಡಿಕೆಯಾಗಿತ್ತು. ಆಗ ಪಿಲಾತನು ಒಂದು ವಿಳಾಸವನ್ನು

“ನಜರೇತಿನ ಯೇಸು, ಯೆಹೂದ್ಯರ ಅರಸನು” ಎಂದು ಬರೆದು ಹಾಕಿದನು (ವಚನ 19). ಈ ರೀತಿ ಮೂರು ಭಾಷೆಗಳಲ್ಲಿ[2] ಬರೆದಿದ್ದರಿಂದ ಯೆಹೂದ್ಯರು ಪ್ರತಿಭಟಿಸಿದರೂ, ಪಿಲಾತನು, “ನಾನು ಬರೆದದ್ದು, ಬರೆದಾಯಿತು” ಅಂದನು (ವಚನ 22). ಅವನ ಪ್ರತಿಕ್ರಿಯೆಗಳು ಒತ್ತಾಯ ಪೂರ್ವಕವಾಗಿ ಉಂಟಾಗಿದ್ದರೂ, “ಯೇಸು ಯೆಹೂದ್ಯರ ಅರಸನು ಎಂಬ ಸತ್ಯವನ್ನೆ” ಪ್ರಕಟಿಸಿದನು.

ವಚನ 30ರಲ್ಲಿ ಯೇಸುವಿನ ಅರಸುತನವನ್ನು ನಿರ್ಧಿಷ್ಟವಾಗಿ ತೋರಿಸದೆ ಇದ್ದರೂ, “ತನ್ನ ಆತ್ಮವನ್ನು ಒಪ್ಪಿಸಿಬಿಟ್ಟನು” ಎಂಬ ಹೇಳಿಕೆಯಲ್ಲಿ ಒಂದು ಸೂಚನೆಯನ್ನು ಕಾಣುತ್ತೇವೆ. “ಯೇಸು ಆ ಹುಳಿ ರಸವನ್ನು ತಕ್ಕೊಂಡ ಮೇಲೆ ತೀರಿತು ಎಂದು ಹೇಳಿ ತಲೆ ಬಾಗಿಸಿ” ತನ್ನ ಆತ್ಮವನ್ನು ಒಪ್ಪಿಸಿಕೊಟ್ಟನು. ಯಾವ ಸುವಾರ್ತೆಯು ಸಹ ಆತನು ಕೊಲ್ಲಲ್ಪಟ್ಟನು ಎಂದು ಹೇಳುವದಿಲ್ಲ. ಅಥವಾ “ಕೊಲೆಗೀಡಾದನು” ಎಂದು ಹೇಳುವದಿಲ್ಲ. ಆದರೆ ತಕ್ಕ ಸಮಯದಲ್ಲಿ ತನ್ನ ಪ್ರಾಣವನ್ನು ತಾನೇ ಒಪ್ಪಿಸಿಬಿಟ್ಟನು ಎಂದು ಹೇಳುತ್ತವೆ.

“ತೀರಿತು” ಎಂಬುದರ ಅರ್ಥವೇನು! ತೀರಿದ್ದಾದರೂ ಏನು? ಅಂದರೆ ಆತನು ಈ ಲೋಕಕ್ಕೆ ಬಂದ ಉದ್ದೇಶ ಈಡೇರಿತು ಎಂಬದೆ. ಆತನು ಈ ಭೂಲೋಕಕ್ಕೆ ಬಾಧೆಗೊಳಗಾದ ಸೇವಕನಾಗಿ ಬಂದು ತನ್ನ ಜನರನ್ನು ವಿಮೋಚಿಸುವುದೇ ಎಂಬ ಅಂಶವು ಯೆಶಾಯ 53ರ, ವಾಕ್ಯದ ಪ್ರಕಾರ ಸಂಪೂರ್ಣವಾಯಿತು ಎಂಬದೇ. ನಂತರದಲ್ಲಿ ಲೋಕದ ಸಕಲ ಜನಾಂಗದವರಿಗೆಲ್ಲಾ, ಆತನ ಸಂತತಿಯ ಮೂಲಕ ಆಶೀರ್ವಾದ ಉಂಟಾಗುವದು ಎಂದು ಅಬ್ರಹಾಮನಿಗೆ ವಾಗ್ದಾನವಾದಂತೆ, ದಾವೀದನ ಮಗನು ಇಸ್ರಾಯೇಲ್ಯರ ಸಿಂಹಾಸನವನ್ನು ಏರುವನು ಎಂಬ ಪ್ರವಾದಿಯ ಮಾತಿನಂತೆ, ಯೇಸುವಿನ ಮರಣವು ಉಂಟಾಗದೆ ಅಥವಾ ಭಯಂಕರವಾದ ಅಪರಾಧಿಯ ಮರಣದ ಶಿಕ್ಷೆಯಂತೆಯೂ ಜರುಗಲಿಲ್ಲ. ಜನರ ಬಿಡುಗಡೆಗಾಗಿ ಬಂದಂಥ ಒಬ್ಬ ಮೆಸ್ಸೀಯನ/ಅರಸನ ಮರಣವು ಅದಾಗಿತ್ತು. ಅದು ಮನುಷ್ಯರ ಬಯಕೆಯಂತಾಗದೆ ಲೋಕದ ಆರಂಭದ ಮೊದಲೇ ನಿರ್ಮಾಣವಾದ ದೇವ ಯೋಜನೆಯ ಪೂರ್ಣತೆಯಾಗಿತ್ತು.

## ಪಾಪ ನಿವಾರಣೆಗಾಗಿ ಆತನು ಸತ್ತನು

ಯೋಹಾನನು ತಾನು ಸುವಾರ್ತೆಯನ್ನು ಬರೆಯುವ ಸಮಯದಲ್ಲಿ ಸ್ನಾನಿಕನಾದ ಯೋಹಾನನ ಯೇಸುವನ್ನು ನೋಡಿ, “ಇಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ” ಲೋಕದ ಪಾಪಗಳನ್ನು ನಿವಾರಣೆ ಮಾಡುವನು ಅಂದನು (1:29). ಈ ಒಂದು ಅಸಹಜವಾದ ಹೇಳಿಕೆಯ ಮೂಲಕ, ಯೇಸು ಅಂತಿಮವಾದ ಯಜ್ಞದ ಕುರಿ ಎಂದು ಸೂಚಿಸಿದನು. ಆತನು ಒಂದೇ ಸಾರಿ ಯಜ್ಞ ಹೊಂದುವವನಾಗಿದ್ದನು. ತರುವಾಯ ಯಾಜಕನಾದ ಕಾಯಫನು ಅರಿವಿಲ್ಲದೆ ಒಂದು ಪ್ರವಾದನೆಯನ್ನು ಮಾಡಿ, “... ಜನವೆಲ್ಲಾ ನಾಶವಾಗು ವದಕ್ಕಿಂತ ಒಬ್ಬ ಮನುಷ್ಯನು ಸಾಯುವದು” ವಿಹಿತ ಅಂದನು (11:50). ಯೋಹಾನನು ಇದಕ್ಕೆ ಪ್ರತಿಕ್ರಿಯಿಸಿ,

> ಇದನ್ನು ಅವನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ; ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದದರಿಂದ ದೇವಪ್ರೇರಣೆಯಿಂದ ಮಾತಾಡಿ ಯೇಸು ಆ ಜನ ಕ್ಕೋಸ್ಕರ ಸಾಯುವದಕ್ಕಿದ್ದನೆಂದು ಹೇಳಿದನು. ಯೇಸು ಆ ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು (11:51, 52).

ಅಂದರೆ ಯೇಸು ಯೆಹೂದ್ಯರಿಗಾಗಿಯೂ, ಹಾಗೂ ಇಸ್ರಾಯೇಲ್ಯರಿಂದ ಹೊರ ಇರುವವರಿಗಾಗಿಯೂ ಸಾಯುವದಕ್ಕೆ ಇದ್ದನು ಅಂದನು. ಯೋಹಾನ 12:31-33ರಲ್ಲಿ

ಇದನ್ನು ಪುನರುಚ್ಚರಿಸಿ, "... ನಾನು ಭೂಮಿಯಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು ಎಂದು ಹೇಳಿದನು" (ಶಿಲುಬೆಯಲ್ಲಿ ವಚನ 32).

ಯೋಹಾನ 19 ಮತ್ತು 20ರಲ್ಲಿ, ಆತನು ಯಜ್ಞದ ಕುರಿ ಎಂದು ಮೊದಲನೆಯ ಸಾರಿ ವ್ಯಾಖ್ಯಾನಿಸಲಾಗಿದೆ, ಮತ್ತು ಅದು ಪಸ್ಕ ಹಬ್ಬದ ಸಂದರ್ಭದಲ್ಲಿ ಕ್ರೂಜೆಯಲ್ಲಿ ಜರುಗುವದಕ್ಕಿತ್ತು. ಈಗಾಗಲೇ ತಿಳಿಸಿರುವಂತೆ, 18:39ರಲ್ಲಿ, ಪಸ್ಕ ಹಬ್ಬದಲ್ಲಿ ಒಬ್ಬ ಅಪರಾಧಿಯನ್ನು ಬಿಡುಗಡೆ ಮಾಡಬಹುದು ಎಂದು, ಯೇಸು ತನ್ನ ಮುಂದೆ ನಿಂತಿರು ವಾಗ ಪಿಲಾತನು ಹೇಳಿದನು, "ಮತ್ತು ಪಿಲಾತನು ಗುಂಪನ್ನು ನೋಡಿ, ಅವರ ಮುಂದೆ ಯೇಸುವನ್ನು ಕರತಂದು, ಇಗೋ ನಿಮ್ಮ ಅರಸನು" ಅಂದನು (19:14). ಅಂದು ಪಸ್ಕದ ಹಿಂದಿನ ಸೌರಣೆಯ ದಿನವಾಗಿತ್ತು, ಆ ಸಾಯಂಕಾಲದ ಊಟದಲ್ಲಿ ಪಸ್ಕದ ಕುರಿಯನ್ನು ಕೊಯ್ಯಲಾಗುತ್ತಿತ್ತು (ವಿಮೋಚನಕಾಂಡ 12:6; ಲೂಕ 22:7). ವಚನ 31ರಲ್ಲಿ ಪುನಃ ಅಂದು ಸೌರಣೆಯು ದಿನವಾಗಿದ್ದರಿಂದ, ಯೆಹೂದ್ಯರ ಪದ್ಧತಿಯ ಪ್ರಕಾರ ಶವಗಳನ್ನು ಶಿಲುಬೆಯ ಮೇಲೆ ಬಿಡಬಾರದಿತ್ತು. ಮತ್ತು ಪಸ್ಕದ ಸಾಯಂಕಾಲವು ಆರಂಭವಾಗಲಿತ್ತು.

ಯೋಹಾನನು ಈ ಅಂಶವನ್ನು ಮರೆಮಾಚದೆ: ಯೇಸು ಲೋಕದವರ ಪಾಪಗಳನ್ನು ನಿವಾರಣೆ ಮಾಡುವ ಸಲುವಾಗಿ ಯಜ್ಞದ ಕುರಿಯಾದನು. ಆ ಒಂದು ವಿಧವಾದ ಬಾಧೆಗಳಿಗೆ ಒಳಪಟ್ಟ ಪ್ರೀತಿಯು, "ನಮ್ಮನ್ನು ಶಿಲುಬೆಯ ಸಮೀಪಕ್ಕೆ ಸೆಳೆಯುತ್ತದೆ, ಅಲ್ಲಿ ಪಾಪಕ್ಷಮೆ ಹಾಗೂ ನಿತ್ಯಜೀವ ದೊರೆಯುತ್ತದೆ."

## ಮರಣದ ನಂತರ ಪುನರುತ್ಥಾನವಾಯಿತು

"ವಾರದ ಮೊದಲನೆಯ ದಿನದಲ್ಲಿ" ಮಹಿಮೆಯ ಸಂಗತಿ ನಡೆಯಿತು ಎಂದು ಯೋಹಾನ 20ರಲ್ಲಿ ದಾಖಲೆಗಳಿವೆ (ಭಾನುವಾರ ಮುಂಜಾನೆ), ಆ ಮುಂಜಾನೆ ಆತನು ಪುನರುತ್ಥಾನವಾದನು (ವಚನ 1ಎ). ಮಗ್ಧಲದ ಮರಿಯಳು ನಸುಕಿನಲ್ಲಿ ಆ ಸಮಾಧಿಯ ಬಳಿ ಬಂದಾಗ, ಸಮಾಧಿಯನ್ನು ಮುಚ್ಚಿದ ಕಲ್ಲು ಈಗಾಗಲೇ ತೆಗೆಯಲ್ಪಟ್ಟಿತ್ತು (ವಚನ 1ಬಿ). (ಇತರೆ ಸುವಾರ್ತೆಗಳಲ್ಲಿ ಬೇರೆ ಸ್ತ್ರೀಯರೂ ಇದ್ದರೂ ಎಂದಿದ್ದರು, ಯೋಹಾನನು ಮರಿಯಳಿಗೆ ಒತ್ತು ನೀಡಿರುವನು). ತರುವಾಯ ಪೇತ್ರ ಯೋಹಾನರು ಸಮಾಧಿಯ ಒಳಗಡೆ ನೋಡಿದಾಗ, ಯೇಸುವಿನ ಸಮಾಧಿಯ ಉಡುಪುಗಳು ಬದಿಯಲ್ಲಿರುವದನ್ನು ಕಂಡರು. ಒಂದು ವೇಳೆ ಹೆಣವನ್ನು ಯಾರಾದರೂ ಕದ್ದಿರುವದಾದರೆ, ಅದು ಈ ಪ್ರಕಾರ ಇರುವದಿಲ್ಲ!

ಜೀವದಿಂದ ಎದ್ದು ಬಂದ ಯೇಸುವಿಗೂ ಮತ್ತು ಖಾಲಿಯಾದ ಸಮಾಧಿಗೂ ಮರಿಯಳೇ ಪ್ರಥಮವಾದ ಸಾಕ್ಷಿಯಾದಳು. ಈ ಒಂದು ಕಥೆಯನ್ನು ಆದಿ ಕ್ರೈಸ್ತರು ಬರೆಯಲಿಲ್ಲ ಎಂಬುದಕ್ಕೆ ಇದು ಸ್ಪಷ್ಟ ಸೂಚನೆಯಾಗಿದೆ ಎಂದು ಕೆಲವು ಪಂಡಿತರ ಅಭಿಪ್ರಾಯವಾಗಿದೆ. ಮೊದಲನೆಯ ಶತಮಾನದಲ್ಲಿ ಯಾರೂ ಸಹ ಈ ವಿಧವಾದ ಕಟ್ಟು ಕಥೆಯನ್ನು ಮಾಡಲು ಸಾಧ್ಯವಿಲ್ಲ, ಮತ್ತು ಸ್ತ್ರೀಯ ಸಾಕ್ಷಿಯನ್ನು ಹಗುರವಾಗಿ ಪರಿಗಣಿಸಿರುವದಿಲ್ಲ, ಇತಿಹಾಸದ ಈ ಕಾರ್ಯಕ್ಕೆ ಬಹಳ ವಾಗ್ವಾದಗಳಿವೆ. ನಾಲ್ಕು ಸುವಾರ್ತೆಗಳಲ್ಲೂ, ಸ್ತ್ರೀಯರ ಸಾಕ್ಷಿಗಳನ್ನೇ ಊರ್ಜಿತಗೊಳಿಸಲಾಗಿದೆ.

ಈಗ ಪುನರುತ್ಥಾನದ ಮೊದಲ ಚಿತ್ರಣವನ್ನು ನೋಡುತ್ತೇವೆ. ಯೋಹಾನ 20:11-18 ರಲ್ಲಿ, ಯೇಸು ಮರಿಯಳಿಗೆ ಕಾಣಿಸಿಕೊಂಡನು, ಅಲ್ಲಿ ಆಕೆಯು ಆತನನ್ನು ತೋಟಗಾರನೆಂದು ಅಪಾರ್ಥಮಾಡಿಕೊಂಡಳು. ನಂತರ ಆತನು ಹತ್ತು ಜನ ಅಪೊಸ್ತಲರಿಗೆ ಕಾಣಿಸಿಕೊಂಡನು (ಯೂದನ ಹೊರತಾಗಿ) ಹಾಗೂ ತೋಮನು ಅಲ್ಲಿರಲಿಲ್ಲ, (19, 20 ವಚನಗಳು). ಆ ಹತ್ತು ಜನರಿಂದ ತೋಮನು ವರದಿಯನ್ನು ಪಡೆದ ನಂತರ, ಪುನರುತ್ಥಾನ ಹೊಂದಿದ ಯೇಸುವನ್ನು ದೈಹಿಕವಾಗಿ ನೋಡದ ಹೊರತು ಆತನನ್ನು ನಂಬುವದಿಲ್ಲ ಎಂಬ ಸಂದೇಹ ವನ್ನು ವ್ಯಕ್ತಪಡಿಸಿದನು. ಎಂಟು ದಿವಸಗಳ ನಂತರ ಯೇಸು ಅವನಿಗೆ ಆ ಅವಕಾಶವನ್ನು

ಕಲ್ಪಿಸಿಕೊಟ್ಟನು, ಅದಕ್ಕೆ ಅವನು ಪ್ರತಿಕ್ರಿಯೆ ನೀಡಿ, "ನನ್ನ ಸ್ವಾಮಿ ನನ್ನ ದೇವರು" ಅಂದನು! (ವಚನ 28).

ಯೇಸು ಪುನರುತ್ಥಾನ ಹೊಂದಿದ ನಂತರದಲ್ಲಿ ಕಾಣಿಸಿಕೊಂಡ ವಿಚಾರವನ್ನು ಸುವಾರ್ತೆಗಳು ವಿಧವಿಧವಾಗಿ ಬಿಂಬಿಸುತ್ತವೆ,[3] ಅಪೊಸ್ತಲರ ಕೃತ್ಯಗಳು 1:3 ಆ ಪ್ರತ್ಯಕ್ಷತೆಗಳು ನಲವತ್ತು - ದಿನಗಳ ಅವಧಿಯಲ್ಲಿ ಸಂಭವಿಸಿದವೆಂದು ಹೇಳುತ್ತದೆ. ಎಲ್ಲಾ ಪುನರುತ್ಥಾನದ ಎಲ್ಲಾ ಪ್ರತ್ಯಕ್ಷತೆಗಳನ್ನು ಯಾವ ಸುವಾರ್ತೆಯು ಹೇಳುತ್ತಿಲ್ಲ, ಆದರೆ ಲೇಖಕರು ಅವರ ಉದ್ದೇಶಕ್ಕೆ ತಕ್ಕಂತೆ ಅವುಗಳಿಂದ ಆರಿಸಿಕೊಂಡರು. 1 ಕೊರಿಂಥ 15:5-8ರಲ್ಲಿ, ಕೆಲವು ಪುನರುತ್ಥಾನದ ಪ್ರತ್ಯಕ್ಷತೆಗಳನ್ನು ಪೌಲಪ್ರಸ್ತಾಪಿಸಿದನು - ಯಾಕೋಬನಿಗೆ (ಯೇಸುವಿನ ಸಹೋದರನಾದ) ಮತ್ತು "ಒಂದೇ ಸಮಯದಲ್ಲಿ ಐದು ನೂರು ಮಂದಿಗಿಂತ ಹೆಚ್ಚು ಸಹೋದರರಿಗೆ" ಕಾಣಿಸಿಕೊಂಡರು. ಇವು ಸುವಾರ್ತೆಗಳಲ್ಲಿ ದಾಖಲಾಗಿಲ್ಲ.

ಈ ಪ್ರತ್ಯಕ್ಷತೆಗಳ ಉದ್ದೇಶವೇನು ಮತ್ತು ಯೇಸುವಿನ ಕಥೆಗೆ ಅವುಗಳ ಪ್ರಮುಖ್ಯತೆ ಏನು? ಪ್ರಥಮವಾಗಿ, ಆತನು ಜೀವದಿಂದ ಎದ್ದಿರುವನು ಎಂದು ಆತನ ಶಿಷ್ಯರಿಂದ ಸಾಭೀತು ಪಡಿಸಿಕೊಂಡರು, ಯಾಕಂದರೆ ಅವರು ಅದಕ್ಕಾಗಿ ಸಾಕ್ಷಿಗಳಾಗುವದಕ್ಕೆ ತಮ್ಮನ್ನು ಸಿದ್ಧಪಡಿಸಿಕೊಂಡರು, ಅಪೊಸ್ತಲರಾಗಿ ಸಾಕ್ಷಿಯಾಗಬೇಕಿದ್ದರೆ, ಒಬ್ಬನು ಯೇಸುವನ್ನು ಧೈಹಿಕವಾಗಿ ಯೇಸುವಿನ ಸೇವೆ ಅಂದರೆ ಆತನ ದೀಕ್ಷಾಸ್ನಾನ ದಿನದಿಂದ ಆತನು ಪರಲೋಕಕಕ್ಕೆ ಏರಿ ಹೋಗುವವರೆಗೆ ಆತನ ಸಂಗಡ ಇರಬೇಕಿತ್ತು (ಅಪೊಸ್ತಲರ ಕೃತ್ಯಗಳು 1:21, 22). ಪೌಲನು ತನ್ನ ಅಪೊಸ್ತಲ ತನವನ್ನು ನಾನು ಅಪೊಸ್ತಲನಲ್ಲವೇ? ನಾನು ಯೇಸುವನ್ನು ಕಣ್ಣಾರೆ ಕಂಡಿಲ್ಲವೇ? ಎಂದು ದೃಢಪಡಿಸಿದು (1 ಕೊರಿಂಥ 9:1). ದಮಸ್ಕದ ದಾರಿಯಲ್ಲಿ ಯೇಸು ಅಪೊಸ್ತಲನಾದ ಪೌಲನಿಗೆ ಮೂರು ಸಾರಿ ಕಾಣಿಸಿಕೊಂಡದ್ದನ್ನು ದಾಖಲು ಮಾಡಲಾಗಿದೆ (ಅಪೊಸ್ತಲರ ಕೃತ್ಯಗಳು 9; 22; 26). ಪೌಲನು ಮೂಲತ ಅಪೊಸ್ತಲನಾಗದೆ ಇದ್ದದ್ದರಿಂದ, ದೇವರಿಂದ ಅವನು ಆಯ್ಕೆಗೊಂಡ ಅಪೊಸ್ತಲನು ಎಂದು ನಿರೂಪಿಸಬೇಕಿತ್ತು. ಅಂದರೆ ಅವನೂ ಸಹ ಕರ್ತನನ್ನು ನೋಡಿದ್ದನು, ಮತ್ತು ಪುನರುತ್ಥಾನವಾದ ಯೇಸುವನ್ನು ಮುಖಾಮುಖಿಯಾಗಿ ನೋಡಿದ್ದನು, ಆದ್ದರಿಂದ ಸುವಾರ್ತೆಯನ್ನು ಸಾರಲು ಅವನು ಅರ್ಹನಾಗಿದ್ದನು ಎಂದು ನಿರೂಪಿಸಿದನು.

ಎರಡನೆಯದಾಗಿ, ಯೇಸು ತನ್ನನ್ನು ತೋರಿಸಿಕೊಂಡದ್ದರಿಂದ, ಆತನನ್ನು ದೇವರ ಮಗನೆಂದು ಅರಿಯಲು ಸಾಧ್ಯವಾಯಿತು. ಆತನು ಒಂದು ವೇಳೆ ಸಮಾಧಿಯಲ್ಲೇ ಇದ್ದಿದ್ದರೆ, ಆತನು ಸುಳ್ಳುಗಾರನು ಮತ್ತು ಕ್ರೈಸ್ತತ್ವವೂ ಸಹ ಸುಳ್ಳೆ ಆಗಿರುತ್ತಿತ್ತು, ಇತರೆ ಸುಳ್ಳಾದ ಧರ್ಮಗಳಂತೆ ಅರ್ಥರಹಿತವಾದ ತತ್ವವನ್ನು ಹೊಂದುವ ಸಾಧ್ಯತೆಯಿತ್ತು. ಆದರೆ ಯೇಸು ಸತ್ಯವಾಗಿಯೂ ಸಮಾಧಿಯಿಂದ ಎದ್ದು ಬಂದಿರುವದರಿಂದ, ಹಾಗೂ ಆತನು ಕಾಣಿಸುವಿಕೆಯು ಸಾಭೀತಾಗಿರುವದರಿಂದ, ಆ ಚಿತ್ರಣವು ಪೂರ್ಣವಾದ ವ್ಯತ್ಯಾಸವನ್ನು ಹೊಂದಿರುತ್ತದೆ. ರೋಮಾಪುರ 1:4ರಲ್ಲಿ ಪೌಲನು, "ಪವಿತ್ರಾತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನು ಆಗಿದ್ದಾನೆ." ದೇವಕುಮಾರ ಎಂಬ ನಿರ್ಣಯ ಅಂದರೆ "ನೇಮಕ" ಅಥವಾ "ಘೋಷಣೆ" ಎಂದಿರುತ್ತದೆ. ಯೇಸು ಮರಣದಿಂದ ಎದ್ದು ಬಂದ ನಂತರ ಆತನು ದೇವ ಕುಮಾರನಾದನೆಂದು ಪೌಲನು ತಿಳಿಸದೆ, ಆತನ ಪುನರುತ್ಥಾನದ ಮೂಲಕ. ದೇವರ ಮಗನೆಂದು ಘೋಷಿತಗೊಂಡನು ಎಂದು ತಿಳಿಸುತ್ತಿರುವನು.

ಕ್ರೈಸ್ತರು ಒಬ್ಬ ರಕ್ತ ಸಾಕ್ಷಿಯ ನೆನಪನ್ನು ಆರಾಧನೆ ಮಾಡದೆ ಕ್ರೂಜಿತನಾಗಿ ಎದ್ದು ಬಂದ ಕರ್ತನನ್ನೇ ಆರಾಧಿಸುತ್ತಾರೆ - ಆತನು ಈಗ ಪರಲೋಕದಲ್ಲಿರುವನು, ನಮಗಾಗಿ ಪ್ರಾರ್ಥಿಸುತ್ತಿರುವನು. ಪವಿತ್ರಾತ್ಮನ ಮೂಲಕವಾಗಿ ಈಗ ಇಲ್ಲಿಯೂ ನಮ್ಮೊಂದಿಗಿರುವನು ಕರ್ತನ ಭೋಜನದಲ್ಲಿ ಆತೊಂದಿಗೆ ಅನ್ಯೋನ್ಯತೆಯನ್ನು ಹೊಂದಿರುವೆವು. ಅದು, ಕಳೆದು

ಹೋದ ಒಂದು ವಿಚಾರದ ನೆನಪಾಗಿರದೆ (ನೆನಪಾಗಿದ್ದರೂ); ಅದು ಜೀವದಿಂದ ಎದ್ದು ಬಂದ ಯೇಸುವಿನೊಂದಿಗಿರುವ, ಆತನ ಅನುಯಾಯಿಗಳ ಜೀವಕರವಾದ ಅನ್ಯೋನ್ಯತೆ ಯೇಸು ಮರಣದಲ್ಲೇ ಮುಂದವರೆಯಲ್ಲಿಲ್ಲ. ಇದರ ನಿಮಿತ್ತವಾಗಿ, ನಾವುಗಳು ಜೀವವುಳ್ಳ ಭರವಸೆ ಹಾಗೂ ಆತನ ಅನ್ಯೋನ್ಯತೆಯನ್ನು ಹೊಂದುತ್ತಿರುವೆವು.

## "ನೀವುಗಳು ನಂಬುವಂತೆ"

ಯೋಹಾನನ ಕಡೆಯ 20 ವಚನಗಳಲ್ಲಿ "ಯೋಹಾನನ ಉದ್ದೇಶ ಪೂರ್ವಕವಾದ ಹೇಳಿಕೆಯಾಗಿರುತ್ತದೆ" ಆತನ ಹೇಳಿಕೆಗಳಿಗಿಂತಲೂ, ಯೋಹಾನನು ಆ ವಿಚಾರಗಳಿಗೆ ಸಾಕ್ಷಿಯಾಗಿದ್ದನು. ಅವನ ಪುಸ್ತಕವೇ ಹಿಡಿಸಲಾರದಷ್ಟು ಸಂಗತಿಗಳಿಗೆ ಅವನು ಸಾಕ್ಷಿಯಾಗಿದ್ದನು (21:25 ಸಮನಾದ ಹೇಳಿಕೆಯಿದೆ). ಯೇಸುವಿನ ಕುರಿತು ಯೋಹಾನನು ತಿಳಿದಿದ್ದ ಸಕಲ ಸಂಗತಿಗಳನ್ನು ಹೇಳಲು ಬಯಸದೆ, ಒಬ್ಬ ಅನ್ಯನ ಭಕ್ತಿಯನ್ನು ಬಲಪಡಿಸುವಂತೆ, ಮತ್ತು ನಂಬಿಕೆಯನ್ನು ವೃದ್ಧಿಪಡಿಸುವಂತೆ ಯೇಸುವಿನ ಸೇವೆಯ "ಕುರಿತಾದ" ಸೂಚನೆಗಳನ್ನು ಎಚ್ಚರದಿಂದ ಆಯ್ಕೆ ಮಾಡಿಕೊಂಡಿರುವನು. ಯೋಹಾನನು ಯೇಸುವಿನ ಕುರಿತಾದ "ಮಾಹಿತಿಯನ್ನು" ನೀಡದೆ; ಕರ್ತನಲ್ಲಿರುವ ನಮ್ಮ ನಂಬಿಕೆಯನ್ನು ಬಲಪಡಿಸುವುದೇ ಆಗಿರುತ್ತದೆ.[4] "ಆದರೆ ಯೇಸು ದೇವ ಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (ವಚನ 31). ಈ ಕಥೆಯು ನಂಬಿಕೆಗೆ ಯೋಗ್ಯ ವಾಗಿದೆ. ಜೀವಪಡೆಯಲು ನಂಬಿಕೆ ಪ್ರಮುಖವಾ ಗಿದೆ.

## ಮುಕ್ತಾಯ

ಕ್ರೂಜಿತನಾದ ಯೇಸುವಿನ ಬಾಧೆಗಳ ಬಗ್ಗೆಯೇ ಯೋಹಾನನು ತಿಳಿಸದೆ, ಅದಕ್ಕಿಂತಲೂ ಮಹತ್ವದ ಸಂಗತಿಗಳನ್ನು ತಿಳಿಸಿರುವನು. ಯೇಸು ಯೆಹೂದ್ಯರ ಅರಸನಾಗಿ ಮತ್ತು ಲೋಕದ ರಕ್ಷಕನಾಗಿ ಮರಣವನ್ನು ಅನುಭವಿಸಿದನು; ನಮ್ಮೆಲ್ಲರನ್ನು ಪಾಪದಿಂದ ಬಿಡಿಸುವ ಸಲುವಾಗಿ ಸತ್ತನು; ಮರಣವನ್ನು ಜಯಿಸುವದರ ಮೂಲಕ, ನಮಗೆ ಜೀವಿಕರವಾದ ನಿರೀಕ್ಷೆಯನ್ನು ನೀಡಿದನು.

---

ಟಿಪ್ಪಣಿಗಳು

[1]Eusebius *Ecclesiastical History* 4.15.4. [2]ಯೋಹಾನ 19:20ರಲ್ಲಿ ಅರಾಮ್ಯದ ಆಕಾರವನ್ನು ಬಳಸಲಾಗಿದೆ. ಅದು ಪಾಲಿಸ್ತೇನಿನಲ್ಲಿದ್ದ ಯೆಹೂದ್ಯರ ಸಾಮಾನ್ಯ ಭಾಷೆಯಾಗಿತ್ತು. ರೋಮಾಯರ ರಾಷ್ಟ್ರೀಯ ಭಾಷೆ ಲ್ಯಾಟಿನ್. 400 ವರ್ಷಗಳ ಹಿಂದೆ ಅಲೆಕ್ಸಾಂದ್ರನು ಆಡಳಿದಲ್ಲಿ ಮೆಡಿಟೆರೇನಿಯನ್ ಪ್ರಾಂತದಲ್ಲಿ ಗ್ರೀಕ್ ಭಾಷೆಯನ್ನು ಬಳಸುತ್ತಿದ್ದರು. [3]ಮಾರ್ಕನ ಸುವಾರ್ತೆಯ ಮಾರ್ಕ 16:9-20ಯಲ್ಲಿ ಮೂಲ ಸುವಾರ್ತೆಗೆ ಸಮನಾಗಿರುವದಿಲ್ಲ ಎಂಬ ಹೇಳಿಕೆಯಾಗಿದೆ. ಆದಿ ಗ್ರಂಥಗಳಲ್ಲಿ ಈ ಮೇಲಿನ ವಾಕ್ಯಭಾಗ ಇರುವದಿಲ್ಲ. [4]ಮಾರ್ಕ, ಮತ್ತಾಯ ಹಾಗೂ ಲೂಕನಲ್ಲಿ ಸರಿಯಾಗಿದ್ದರೂ, ಯೋಹಾನನು ಓದುಗರನ್ನು ನೇರ ವ್ಯಕ್ತಿ ಎಂದು ತಿಳಿದು ಮಾತನಾಡಿರುವನು ("ನೀನು") ಕಥೆಯು ಸಾಮಾನ್ಯವಾಗಿರದೆ, ನೇರವಾಗಿ ಒಬ್ಬ ವ್ಯಕ್ತಿಗೆ ಹೇಳಿರುವದು ಎಂದು ಯೋಹಾನನು ತಿಳಿಯಬಯಸಿದನು.